ಮುಂದನೋಡಿ ಚಂದ್ರವತಿ ಬಟ್ಟೆ ಒಗೆಯುತ್ತಿದ್ದಾಗ ಮೆಲ್ಲನೆ ಕಾಲುವೆಗೆ ಇಳಿದು ರಭಸದಿಂದ ಹರಿಯುವ ಕಾಲುವೆಗೆ ಕೊಚ್ಚಿಕೊಂಡು ಹೋಗಿತ್ತು. ಅದೊಂದು ದೊಡ್ಡ ಕಥೆ ಅಂತ ಅದನ್ನು ನೆನಪಿಸಿಕೊಳ್ಳಲು ಮನಸ್ಸು ಮಾಡದೆ ನಿಟ್ಟುಸಿರುಬಿಡುತ್ತಾ ಚಂಗನೆ ಮಾಯವಾದ ಆ ಬೆಕ್ಕಿನ ಗುಂಗಿನಲ್ಲೇ ರಾಮಚಂದ್ರ ತಾನು ಉಳಿದುಕೊಂಡಿದ್ದ ಹೋಟೆಲ್ ದಾರಿ ಹಿಡಿದ. ಆಫೀಸಿನ ಕೆಲಸದ ಮೇಲೆ ದೆಹಲಿಗೆ ಬಂದಿದ್ದ ರಾಮಚಂದ್ರ ಮೂರು ದಿನವೂ ಮೀಟಿಂಗಿನಲ್ಲಿ ಭಾಗಿಯಾಗಿ ಕೊನೆಯ ದಿನ ಗುರುವಾರವಾದರಿಂದ ದೆಹಲಿಯ ಹಜರತ್ ನಿಜಾಮುದ್ದೀನ್ ದರ್ಗಾದೊಳಗೆ ಕಾಲಿಟ್ಟಾಗ ಕಂಡ ಬಿಳಿ ಪಟ್ಟಿಪಟ್ಟಿಯಿದ್ದ ಬಸಿರ ಬೆಕ್ಕು ಅವನ ಮನಸ್ಸನ್ನು ಕೆದಕಿ ಹಳೆಯದನ್ನೆಲ್ಲ ನೆನಪಿಸಿತ್ತು.

***

ರಾಮಚಂದ್ರ ಹೋಟೆಲ್ ದಾರಿ ಹಿಡಿಯುತ್ತಲೇ ಮತ್ತೆ ಬೆಕ್ಕಿನ ಬಗ್ಗೆ ಯೋಚಿಸತೊಡಗಿದ. ಪಾಪ ಬೆಕ್ಕು ತುಂಬು ಬಸಿರಿ. ಇವತ್ತೋ ನಾಳೆನೋ ಹಡೀಬಹುದು. ಈ ಬೆಕ್ಕುಗಳು ಹಡೆದ ಮೇಲೆ ತಮ್ಮ ಮರಿಗಳನ್ನು ಏಳು ಬಾರಿ ಮನೆ ಬದಲಿಸುತ್ತವಂತೆ. ಇದ್ದಕ್ಕಿದ್ದಂತೆ ರಾಧಾ ನೆನಪಾದಳು ರಾಮಚಂದ್ರನಿಗೆ. ಎಷ್ಟು ಮರೀಬೇಕೆಂದರೂ ರಾಧಾ ಬೇರೆ ಬೇರೆ ಕಾರಣಗಳಿಂದ ನೆನಪಾಗುತ್ತಿದ್ದಳು. ಇವತ್ತು ಅಷ್ಟೇ, ಆ ಹಾಳಾದ ಬಸಿರ ಬೆಕ್ಕು ರಾಧಾಳ ನೆನಪು ಹೊತ್ತು ತಂದಿತ್ತು ರಾಮಚಂದ್ರನಿಗೆ. ರಾಧಾಳಿಗೆ ಆರು ತಿಂಗಳು ಹೋಗಿ ಏಳು ತಿಂಗಳು ತುಂಬಿ ಸೀಮಂತ ಮಾಡಿ ತವರಿಗೆ ಕರೆದುಕೊಂಡು ಬರುವಾಗ, ತುಂಬು ಬಸಿರು ರಾಧಾಳಿಗೆ ಅವತ್ತು ಹಾಗೆ ಆಗಿರದಿದ್ದರೆ ಇವತ್ತು ಅವಳ ಮಕ್ಕಳು ಹತ್ತೋ ಹನ್ನೆರಡೋ ತರಗತಿ ಓದುತ್ತಿದ್ದವು.

ರಾಮಚಂದ್ರ ಆಗ ಏಳನೇ ತರಗತಿಯಲ್ಲಿದ್ದ. ರಾಧಾ ತನ್ನ ಮನೆ ಪಕ್ಕದಲ್ಲಿದ್ದ ಹುಡುಗಿ. ಕರ‍್ರಗೆ ಕುಳ್ಳಗೆ ಮೈಕೈ ತುಂಬಿಕೊಂಡು ಕಪ್ಪಗಿದ್ದರೂ ಲಕ್ಷಣವಾಗಿದ್ದಳು. ದಿನಾಲೂ ಅವರ ತಮ್ಮನ ಜೊತೆ ಬೆಳಿಗ್ಗೆ ಆಡುಮರಿಗಳನ್ನು ಹೊಡೆದುಕೊಂಡು ಮೇಯಿಸಿಕೊಂಡು ಬರಲು ಗುಡ್ಡಕ್ಕೆ ಹೋದವಳು ಸಂಜೆಗೆ ಹಿಂದಿರುಗುತ್ತಿದ್ದಳು. ದಿನಾಲೂ ಬೆಳಿಗ್ಗೆ ಮತ್ತು ಸಾಯಂಕಾಲ ರಾಮಚಂದ್ರನ ತಟ್ಟೆಯಂತೆ ಇದ್ದ ಹೋಟೆಲಿನಲ್ಲಿ ತನ್ನ ತಂದೆ ತಾಯಿಗೆ ಚಹಾ ಹಾಕಿಸಿಕೊಂಡು ಹೋಗುತ್ತಿದ್ದಳು. ರಾಮಚಂದ್ರ, ರಾಧಾಳ ಹತ್ತಿರ ಐದು ರೂಪಾಯಿ ತೆಗೆದುಕೊಂಡು ಒಂದು ಅಳತೆ ಮಾಡಲು ಇದ್ದ ಗಾಜಿನ ಗ್ಲಾಸಿನಿಂದ ಚಹಾ ಅಳತೆ ಮಾಡಿ ರಾಧಾ ತಂದ ಗಿಲಾಸಿಗೆ ಹಾಕಿ ಕಳುಹಿಸುತ್ತಿದ್ದ. ಅವಳು ಪ್ರತಿ ಬಾರಿ ಬಂದಾಗಲೂ ಒಂಥರಾ ನಗುತ್ತಾ ರಾಮಚಂದ್ರನ ಕೋಮಲ ಹೃದಯಕ್ಕೆ ಪ್ರೀತಿಯ ಬಾಣ ಬಿಟ್ಟು ಚಹಾ ಹಾಕಿಸಿಕೊಂಡು ಹೋಗುತ್ತಿದ್ದಳು.

ಒಮ್ಮೆ ಒಂದು ಸಾಯಂಕಾಲ ರಾಮಚಂದ್ರ ಮತ್ತು ಅವನ ಗೆಳೆಯರು ಆಟ ಆಡುತ್ತಿರಬೇಕಾದರೆ ರಾಧಾ ಬಂದಳು. ಕುಂಟೆಪಿಲ್ಲೆ, ಹುಲಿಮನೆ, ಕಳ್ಳ–ಪೊಲೀಸ್ ಹೀಗೆ ಬೇರೆ ಬೇರೆ ಆಟ ಆಡಿ ಸಾಕಾದಾಗ ಅವನ ಗೆಳೆಯ, 'ಹೇ, ಗಂಡ ಹೆಂಡತಿ ಆಟ ಆಡೋಣ' ಅಂದಾಗ ಅಲ್ಲಿದ್ದವರೆಲ್ಲ ಹೋ ಅಂತ ಖುಷಿಯಿಂದ ಕೇಕೆ ಹಾಕುತ್ತ ರೆಡಿಯಾದರು. ರಾಮಚಂದ್ರ ಗಂಡನ ಪಾರ್ಟ್ ಮಾಡಲು ರೆಡಿಯಾದ. ಹೆಂಡತಿ ಪಾರ್ಟ್ ಮಾಡಲು ರಾಮಚಂದ್ರನ ಗೆಳೆಯ ಒಪ್ಪಿದ. ಆಗ ರಾಮಚಂದ್ರ 'ನೀನು ಬೇಡ. ಯಾರಾದರೂ ಹೆಣ್ಣುಮಕ್ಕಳು ಮಾಡಿದ್ರೆ ಚೆನ್ನಾಗಿರುತ್ತೆ. ನೀ ಮಾಡ್ತೀಯಾ' ಅಂತ ರಾಧಾಳನ್ನು ಕೇಳಿದ. ಅವಳು ಭುಜ ಮೇಲಕ್ಕೆ ಎಗರಿಸುತ್ತಾ 'ಆಯಿತು' ಅಂದಳು. ಅವರಿಬ್ಬರೂ ನಿಂತ ನಿಲುವಿನಲ್ಲೇ ಒಣಕೆ ಮೇಲೆ ಕೂಡುವಂತೆ ಕುಳಿತರು. ಸ್ವಾಸೆ ಇಟ್ಟು ವಿಭೂತಿ ಕುಂಕುಮ ಹಚ್ಚಿ ಕಳಸ ಬೆಳಗಿ, ಮದುವೆಯಲ್ಲಿ ಮುಖ್ಯವಾಗಿ ತಾಳಿ ಕಟ್ಟುವ ವೇಳೆಯಲ್ಲಿ ಏನೇನೂ ನೋಡಿದ್ದರೋ ಅಷ್ಟನ್ನು ಮಾಡಿದರು. ರಾಮಚಂದ್ರ ಬರೀ ಕೈಯಲ್ಲಿ ತಾಳಿ ಕಟ್ಟುವವನಂತೆ ನಟಿಸಿದ್ದ. ರಾಧಾ ಕತ್ತು ಬಗ್ಗಿಸಿದ್ದಳು. ಇದಾದ ಮೇಲೆ 'ರಾತ್ರಿಯಾಯಿತು, ಮಲಗಿಕೊಳ್ಳಿ' ಅಂತ ಎಲ್ಲರೂ ಉದ್ದಕ್ಕೆ ಮಲಗಿಕೊಂಡರು. ರಾಮಚಂದ್ರನ ಪಕ್ಕದಲ್ಲಿ ರಾಧಾ ಮಲಗಿಕೊಂಡಳು. ರಾಮಚಂದ್ರ ಒಮ್ಮೆ ಕತ್ತಲಲ್ಲಿ ಅಪ್ಪ ಅಮ್ಮ ಮಾಡುವ ಪ್ರೀತಿನ ನೋಡಿದ್ದ. ಅದೇ ರೀತಿ ಅವಳ ಮೇಲೆ ಕೈಹಾಕಿ ತನ್ನ ಮುಖ ಅವಳ ಕೆನ್ನೆ ಹತ್ತಿರ ತಂದು ಮೆಲ್ಲಗೆ ಮುದ್ದುಕೊಟ್ಟ. ಎಲ್ಲ ಹುಡುಗರು ಎದ್ದು ಹೋ ಅಂತ ನಗುತ್ತಿದ್ದರು. ಅವಳು ನಾಚಿಕೆಯಿಂದಲೋ ಇಲ್ಲ ಅವಮಾನದಿಂದಲೋ